ವಾರಿಜಳೊಂದಿಗೆ ಹೊರಗೆ ಹೊರಟಾಗ ಅಮ್ಮ ಎದುರಾದಳು .

'ಅವನ ಜೊತೆ ನೀ ಎಲ್ಲಿಗೆ ವಾರಿ? ಮನೇಲಿ ಏನಾದ್ರೂ ಕೆಲಸ ಮಾಡ್ಕೊಂಡು ಇರಬಾರ್ದಾ? ಆಮೇಲೆ ಜನ ಅದಕ್ಕೂ ಅಂದಾರು.'

ಇದೇ ಮೊದಲು ಅಮ್ಮ ಹಾಗಂದಿದ್ದು. ನನ್ನ ಮತ್ತು ವಾರಿಜಳ ನಡುವೆ ಏನೊಂದೂ ಭೇದವೆಣಿಸದ ಅಮ್ಮ ಇವತ್ತು ಹಾಗಂದಿದ್ದು ಕೇಳಿ ನಾನು ಮೆಟ್ಟಿಬಿದ್ದಿದ್ದೆ.

ವಾರಿಜ ಎಂದಿನಂತೆ 'ಸರಿಯಮ್ಮ' ಅಂದು ಒಳಗೆ ಸರಿದಿದ್ದಳು .

'ಏನಮ್ಮ ಇದು?' ಅಷ್ಟು ತೀಕ್ಷ್ಣವಾಗಿ ನಾನು ಈ ಹಿಂದೆ ಅಮ್ಮನಲ್ಲಿ ಮಾತಾಡಿರಲಿಲ್ಲ ಎಂಬುದು ನನ್ನ ಗಮನಕ್ಕೆ ಬಂತು.

'ಏನೋ ಇದು ನಿಂದು ಇಲ್ಲದ ಆಟ? ಆ ಹುಡ್ಗಿಗೆ ಆಗ್ಲೇ ಮದುವೆಗೆ ಗಂಡು ನೋಡ್ತಾ ಇರೋದು ಗೊತ್ತಾ ಗೊತ್ತಿಲ್ವಾ ನಿಂಗೆ? ನೀನು ಅವಳನ್ನಕರ್ಕೊಂಡು ಹೊಲಗದ್ದೆ ಅಂತ ಸುತ್ತಿದರೆ ನಾಳೆ ಯಾರಾದ್ರೂ ಏನಾದ್ರೂ ಅನ್ನಲ್ವೇನೋ?' ಅಮ್ಮನೂ ಅಷ್ಟೇ ಖಾರವಾಗಿ ಅಂದಳು .

ಅರೆ ವಾರಿಜಳಿಗೆ ಗಂಡು ಹುಡುಕ್ತಾ ಇದ್ದಾರಾ? ಹೇಳಲೇ ಇಲ್ಲವಲ್ಲ ಅವಳು! ಈಗಂತೂ ನನಗೆ ನಿಜಾ ಅವಳ ಮೇಲೆ ಸಿಟ್ಟು ಬಂತು. ಅಮ್ಮನೊಂದಿಗೆ ಮಾತಾಡದೆ ಹೊಲದ ಕಡೆ ನಡೆಯುವಾಗ ಯೋಚಿಸಿದೆ–ನಾಳೆ ವಾರಿಜ ಮದುವೆಯಾಗಿ ಹೋದಮೇಲೆ ಈ ಮನೆ ಹೇಗಿರಬಹುದು? ಇವತ್ತು ಹೇಗೇ ನೋಡಿದರೂ ವಾರಿಜ ಮನೆಯ ಎಲ್ಲರನ್ನೂ ಬೆಸೆವ ಒಂದೇ ಒಂದು ಕೊಂಡಿಯಾಗಿದ್ದಾಳೆ. ನನಗಾದರೂ ಅಮ್ಮನಿಗಾದರೂ ಅಪ್ಪನಿಗೂ ಅಷ್ಟೇ. ಅಪ್ಪ ಅವಳೊಂದಿಗೆ ಎರಡು ಮಾತು ಹೆಚ್ಚೇ ಆಡುತ್ತಾರೆ. ಇಂಥ ವಾರಿ ಇಲ್ಲಿಂದ ಹೋದರೆ ಮನೆ ಬಿಕೋ ಅನ್ನಬಹುದು. ಅಷ್ಟೇಕೆ ನನ್ನ ಕತೆ ಏನಾಗಬಹುದು? ಇವತ್ತು ನನ್ನ ಮಾತನ್ನು ಕೇಳಿಸಿಕೊಳ್ಳುವ ಅರ್ಥ ಮಾಡಿಕೊಳ್ಳುವ ಒಂದೇ ಒಂದು ಜೀವ ವಾರಿ. ಅವಳಿಲ್ಲದೆ ಹೇಗೆ? ನಾನು ಚಿಂತಿಸಿ ದಣಿದೆ. ಅವಳ ಓರಗೆಯ ಹುಡುಗಿಯರಿಗೆ ಆಗಲೇ ಮದುವೆಯಾಗಿ ಮಕ್ಕಳೂ ಆಗಿವೆ. ಇವಳ ಮದುವೆ ಯಾಕೆ ಇಷ್ಟೊಂದು ತಳ್ಳಿಹೋಯ್ತೋ ಗೊತ್ತಿಲ್ಲ. ನಾನು ಪೇಟೆಯಲ್ಲಿದ್ದ ಅಷ್ಟು ವರ್ಷಗಳಲ್ಲಿ ವಾರಿಜ ಯಾಕೆ ಮದುವೆಯಾಗಲಿಲ್ಲ. ಅಮ್ಮನಾಗಲೀ ಅಪ್ಪನಾಗಲೀ ಈ ಕುರಿತು ಏನೂ ಮಾಡಲೇ ಇಲ್ವಾ? ಇಲ್ಲ ಅವಳೇ ಬೇಡವೆಂದಳಾ? ಯೋಚಿಸುತ್ತಲೇ ನಡೆಯುತ್ತಿದ್ದವನ ಎದುರಿಗೆ ಚಂದ್ರಾ ಸಿಕ್ಕಿದ್ದಳು,'ಅರೆ ಇದೇನು ಚಂದ್ರಾ ಇಲ್ಲಿ? ಈ ಕಡೆ ಬಂದಿದ್ದೀಯ? ಹೇಗಿದ್ದೀಯ?' ಒಂದೇಟಿಗೇ ಅಷ್ಟು ಪ್ರಶ್ನೆಗಳನ್ನು ತೂರಿದವನನ್ನು ತೀರ ದಾರಿಗೆ ಅಡ್ಡ ಬಿದ್ದ ಸಣ್ಣಕಲ್ಲೆನೋ ಎಂಬಂತೆ ನಿರ್ಲಕ್ಷ್ಯದಿಂದ ಮಗುಮ್ಮಾಗಿ ದಾಟಿ ಹೋದಳು ಚಂದ್ರಾ. ನನ್ನ ಹೃದಯ ನರಳಿತು.

ಚಂದ್ರಾಳ ಮದುವೆ ದುರಂತದಲ್ಲಿ ಮುಗಿದಿತ್ತು. ಮದುವೆಯಾಗಿ ತಿಂಗಳೊಳಗೆ ಅವಳ ಗಂಡ ತೀರಿಕೊಂಡಿದ್ದ. ಅಮ್ಮನ ಪ್ರಕಾರ ಅವಳು ಗಂಡ ತೀರಿದ ಮೇಲೆ ತವರಿಗೆ ಬಂದು ಬಿಡಬೇಕಿತ್ತು. ಹೇಗೋ ಅಪ್ಪ ಅಮ್ಮ ಇಬ್ಬರೂ ಇದ್ದರು. ಅದೂ ಇದು ಕೆಲಸ ಮಾಡಿಕೊಳ್ತ ಹಾಗೆ ನಾಳೆ ಚಾನ್ಸು ಸಿಕ್ಕಿದರೆ ಬೇರೆ ಕಡೆ ಮದುವೆಯೂ ಆಗಬಹುದಿತ್ತು. ಆದ್ರೆ ಅವರು ಚಂದ್ರಾನ ತವರಿಗೆ ಕಳಿಸದೆ ಅಲ್ಲೇ ಇಟ್ಟುಕೊಂಡಿದ್ರು. ಮುತುವರ್ಜಿಯಿಂದಲೇ ನೋಡಿಕೊಂಡಿರಬೇಕು. ಇಲ್ಲವಾದರೆ ಇಷ್ಟೊಂದು ವರ್ಷಗಳವರೆಗೆ ಅವಳು ಅಲ್ಲೇ ಉಳಿವ ಮನಸು ಮಾಡುತ್ತಿರಲಿಲ್ಲ.

ಇನ್ನೊಂದು ಮದುವೆಯಿಲ್ಲ, ಮಕ್ಕಳಿಲ್ಲ ಬದುಕು ಸುಮ್ಮನೆ ಸಾಗಿತ್ತು. ಆದರೀಗ ಚಂದ್ರಾ ಗರ್ಭಿಣಿಯಾಗಿದ್ದಳು. ವಿಷಯ ತಿಳಿದ ಮೇಲೆ ಅವಳನ್ನೆಷ್ಟು ಕೇಳಿದರೂ ಯಾರೆಂದು ಹೇಳದೆ ಚಂದ್ರಾ ತವರಿಗೆ ವಾಪಾಸ್ಸಾಗಿದ್ದಳು. ತವರಿನಲ್ಲಾದರೂ ಅವಳನ್ನು ಓಲೈಸಿ ಲಾಲಿಸುವವರು ಇರಲಿಲ್ಲ.